# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್ ಸಿ /ಎಸ್ ಟಿ ನಂ : 16/2023

ಪ್ರ.ವ.ಬೋ. ದಿನಾಂಕ – 17.07.2025

| | | | |
|---|---|---|---|
| ಸಾಕ್ಷಿದಾರರ ಹೆಸರು | – ಈರಣ್ಣ | ಪ್ರಾಸಾ | 02 |
| ತಂದೆಯ ಹೆಸರು | – ನಿಂಗಪ್ಪ | ಚಾಸಾ | 02 |
| ವಯಸ್ಸು | – 45 ವರ್ಷ | | |
| ಉದ್ಯೋಗ | – ನೀರಗಂಟಿ ಕೆಲಸ | | |
| ವಾಸ ಸ್ಥಳ | – ಘಟಪರ್ತಿ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ಸಾಕ್ಷಿಗೆ ನಿಪಿ:2 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ:2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ:4 ಎಂದು, ಸಾಕ್ಷಿಯ ಸಹಿಯನ್ನು ನಿಪಿ:4(ಎ) ಎಂದು ಗುರುತಿಸಲಾಯಿತು. ದಿ. 29.1–2023 ರಂದು ವಲಸೆ ಗ್ರಾಮದ ಶಂಕರನಾಯ್ಕನ ಮೆಕ್ಕೆ ಜೋಳದ ಜಮೀನಿನ ಮಣ್ಣು ಬಟ್ಟೆಯನ್ನು ಪ್ಯಾಕ್ ಮಾಡಿರುತ್ತಾರೆ. ಶಂಕರನಾಯ್ಕನ ಶರ್ಟನ್ನು ವಶಕ್ಕೆ ಪಡೆದಿರುತ್ತಾರೆ. ಸದರಿ ಶರ್ಟು ರಕ್ತಮಯವಾಗಿತ್ತು. ಸದರಿ ಶರ್ಟು ಮತ್ತು ಮಣ್ಣನ್ನು ಪ್ಯಾಕ್ ಮಾಡಿ ತೆಗೆದುಕೊಂಡು ಹೋಗಿರುತ್ತಾರೆ. ಶರ್ಟನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ಶರ್ಟನ್ನು ಈಗಾಗಲೇ ಎಂಓ:2 ಎಂದು ಗುರುತಿಸಲಾಗಿದೆ. ಮಣ್ಣು ಮತ್ತು ಮಾದರಿ ರಕ್ತದ ಮಣ್ಣನ್ನು ಈಗಾಗಲೇ ಎಂಓ:3, 4 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ನಿಪಿ:3 ರ ಫೋಟೊವನ್ನು ತೋರಿಸಿದ್ದು ಅದನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನನಗೆ ಚಾಸಾ:3 ರವರು ಸಹಿ ಮಾಡಿರುತ್ತಾರೆ.

**(ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ 500/- ರ ಖರ್ಚಿನೊಂದಿಗೆ ಮುಂದೂಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

**ಸಾಕ್ಷಿಯನ್ನು ದಿನಾಂಕ : 10.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**– ಪಾಟೀ ಸವಾಲು – ಆರೋಪಿಯ ಪರ ಕೆ.ಎನ್.ಎಂ. ವಕೀಲರಿಂದ –**

ನಿಪಿ:2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನಿಪಿ:2 ಕ್ಕೆ ಸಹಿಯನ್ನು ಚಳ್ಳಕೆರೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಫೋಟೊದಲ್ಲಿರುವ ಸ್ಥಳದ ಸರ್ವೆ ನಂಬರು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಫೋಟೊ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ:4 ಕಚ್ಚಾ ನಕ್ಷೆಯನ್ನು ಯಾವ ಉದ್ದೇಶಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ:4 ಕ್ಕೆ ಸಹಿಯನ್ನು ಚಳ್ಳಕೆರೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ:2 ಕ್ಕೆ ಯಾವ ಸಮಯದಲ್ಲಿ ಸಹಿ ಮಾಡಿದ್ದೇನೆ ಎಂದು ಹೇಳಲು ನನಗೆ ಬರುವುದಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.